## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ

**ಸಿ.ಸಿ. ನಂ.460/2023**

ಆರೋಪಿಯ ಹೆಸರು : ಶತ್ರುಹಾನ ಮಹತೊ

ತಂದೆಯ ಹೆಸರು : ಬಾಲದೇವ್ ಮಹತೋ

ವಯಸ್ಸು : 38 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ವಾರ್ಡ ನಂ. 14, ಗೇನಪುರ, ಬಾಜಪಟ್ಟಿ ಬನಗಾಂವ ಬಜಾರ, ಸೀತಾಮಾಡಿ, ಬಿಹಾರ.

**ಹಾಲಿಃ** ಅಬ್ಬೆ, ಮ್ಯಾನಪಾವರ, ಸರಕಾರಿ ಕಾಲೇಜು ಎದುರಿಗೆ, ಹಂಪನಕಟ್ಟಾ, ಮಂಗಳೂರು.

**ದಿನಾಂಕ : 09.10.2023**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಮೇರೆಗೆ ಆರೋಪಿಯ ವಿಚಾರಣೆ**

ಮಾನ್ಯ ನ್ಯಾಯಾಲಯದ, ಭಟ್ಕಳ ಶಹರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ-66ರ ರಸ್ತೆ, ಮೂಡ ಭಟ್ಕಳ ಬೈಪಾಸ್‌ನಲ್ಲಿ ದಿಃ 11.05.2022 ರಂದು 19.00 ಗಂಟೆ ಸುಮಾರಿಗೆ ಆರೋಪಿತನಾದ ನೀವು ಭಾರತ ಗ್ಯಾಸ್ ಟ್ಯಾಂಕರ್ ಲಾರಿ ನಂ. ಕೆಎ-01/ಎಡಿ-7544 ನೇದನ್ನು ಮಂಗಳೂರು ಕಡೆಯಿಂದ ಹೊನ್ನಾವರದ ಕಡೆಗೆ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ **ಕಲಂ.279 ಭಾರತೀಯ ದಂಡ ಸಂಹಿತೆ** ರಡಿಯಲ್ಲಿ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀವು ಚಲಾಯಿಸುತ್ತಿದ್ದ ವಾಹನವನ್ನು ಅದೇ ದಿಸೆಯಲ್ಲಿ ಅಂದರೆ ಕುಂದಾಪುರ ಕಡೆಯಿಂದ ಭಟ್ಕಳ ಶಹರದ ಕಡೆಗೆ ಮುಲ್ಲಾ ಮೊಹಮದ ಇಕ್ಬಾಲ್ ತಂದೆ ಮುಲ್ಲಾ ಮೊಹಮ್ಮದ ಇವರು ಚಲಾಯಿಸಿಕೊಂಡು ಬರುತ್ತಿದ್ದ ಸ್ಕೂಟಿ ನಂ. ಕೆಎ-20/ಇಎಮ್-0821 ನೇದಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿ ಸದ್ರಿಯವರನಿಗೆ ಗಂಬೀರ ಸ್ವರೂಪದ ಗಾಯನೋವುಪಡಿಸಿ, ಸದ್ರಿಯವರ ಮರಣಕ್ಕೆ ಆರೋಪಿತನಾದ ನೀವು ಕಾರಣರಾಗುತ್ತೀರಿ ಮತ್ತು **ಕಲಂ.304(A) ಭಾರತೀಯ ದಂಡ ಸಂಹಿತೆ** ರಡಿಯಲ್ಲಿ ನೀವು ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಪ್ರಶ್ನೆ ಸಂಖ್ಯೆ 1: ನಿಮಗೆ ಓದಿ ಹೇಳಿ ವಿವರಿಸಲಾದ ಆರೋಪವನ್ನು ಅರ್ಥ ಮಾಡಿಕೊಂಡಿದ್ದೀರಾ ?

ಉತ್ತರ : ಅರ್ಥವಾಗಿದೆ

ಪ್ರಶ್ನೆ ಸಂಖ್ಯೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪುತ್ತೀರಾ ಅಥವಾ ನೀವು ವಿಚಾರಣೆ ನಡೆಸುತ್ತೀರಾ ?

ಉತ್ತರ : ವಿಚಾರಣೆ ಆಗಬೇಕು

ಸಹಿ ಇದೆ
ಆರೋಪಿಯ ಸಹಿ

ಸಹಿ ಇದೆ
**ಪ್ರ.ದ.ನ್ಯಾದಂ. ಭಟ್ಕಳ**